ಹಿಂದೀ ಸಾಹಿತ್ಯದಲ್ಲಿ 'ಕಾದಂಬರಿ ಸಾರ್ವಭೌಮ' ಎಂದೇ ಹೆಸರಾದ ಪ್ರೇಮಚಂದ್ (1880–1936) ತಮ್ಮ ಕಥೆ ಮತ್ತು ಕಾದಂಬರಿಗಳಿಂದಾಗಿ ಭಾರತೀಯ ಸಾಹಿತ್ಯದಲ್ಲೇ ಅನನ್ಯರಾದ ಲೇಖಕರು. ಅವರ ನಿಜವಾದ ಹೆಸರು ಧನಪತರಾಯ್ ಶ್ರೀವಾಸ್ತವ. ಅತ್ಯುನ್ನತ ಕಥನಕಲೆಗೆ ಹೆಸರಾದವರು. ಸಾಮಾನ್ಯ ಮನುಷ್ಯನೇ ಅವರೆಲ್ಲ ಸಾಹಿತ್ಯದ ಕೇಂದ್ರ. ಮೊದಲಿಗೆ ಉರ್ದು ಭಾಷೆಯಲ್ಲಿ ಬರೆಯುತ್ತಿದ್ದವರು ಅನಂತರ ಹಿಂದಿಯಲ್ಲಿ ಬರೆದರು. ಅವರ 301 ಕಥೆಗಳು 'ಸಪ್ತ ಸರೋಜ', 'ನವನಿಧಿ'. 'ಪ್ರೇಮಪಚ್ಚೀಸಿ' ಮೊದಲಾದ ಶೀರ್ಷಿಕೆಗಳಲ್ಲಿ ಪ್ರಕಟವಾಗಿ, 'ಮರಣಾನಂತರ' 'ಮಾನಸ ಸರೋವರ' ಶೀರ್ಷಿಕೆಯ ಎಂಟು ಭಾಗಗಳಲ್ಲಿ ಪ್ರಕಟವಾಗಿವೆ. 'ಸೇವಸದನ' 'ರಂಗಭೂಮಿ', 'ಕರ್ಮಭೂಮಿ', 'ಗೋದಾನ' ಮೊದಲಾದ 8 ಕಾದಂಬರಿಗಳಲ್ಲದೆ ಮೂರು ಲೇಖನ ಸಂಪುಟಗಳ ಕರ್ತೃ.

ಎಂಟು ಚಿಲುಮಾ ಆಗಲೇ ಸೇದಿ ಮುಗಿಸಿದೆ. ಆದರೆ, ಹಾಳಾದ್ದು ಥಂಡಿ ಮಾತ್ರ ಹೋಗುತ್ತಾ ಇಲ್ಲ. ಇದು ಬೇಸಾಯದ ಮಜಾ. ಮತ್ತು ಒಬ್ಬೊಬ್ಬ ಅದೃಷ್ಟವಂತನೂ ಹ್ಯಾಗೆ ಬಿದ್ದುಕೊಂಡಿದ್ದಾನೆ ಅಂದರೆ ಅವರ ಹತ್ತಿರಕ್ಕೆ ಥಂಡಿ ಏನಾದರೂ ಹೋಯಿತು ಅಂದರೆ ಅವರ ಶಾಖದ ಝಳಕ್ಕೆ ಗಾಬರಿಯಾಗಿ ಓಡಿಹೋಗುತ್ತೆ. ಅದು ಅವರವರ ಅದೃಷ್ಟದ ವಿಶೇಷತೆ. ಕೂಲಿ ನಾವು ಮಾಡೋದು, ಅದರ ಸುಖ ಮಾತ್ರ ಬೇರೆಯವರಿಗೆ.

ಹಲ್ಕೂ ಮೇಲೆದ್ದು ಬೆಂಕಿಯ ರಾಶಿಯಿಂದ ಒಂದು ಸ್ವಲ್ಪ ಬೆಂಕಿ ಎತ್ತಿಕೊಂಡು ಚಿಲುಮಾ ತುಂಬಿಸಿದ. ಜಬರಾ ಕೂಡ ಎದ್ದು ಕೂತುಕೊಂಡಿತು.

ಚಿಲುಮಾ ಸೇದುತ್ತ ಹಲ್ಕೂ ಹೇಳಿದ, 'ಚಿಲುಮಾ ಸೇದ್ತೀಯಾ! ಚಳಿ ಹೋಗೋದೆಲ್ಲಿ ಬಂತು, ಮನಸ್ಸಿಗೆ ಒಂದಿಷ್ಟು ಹಿತ ಅನ್ನಿಸುತ್ತೆ.'

ಜಬರಾ ಪ್ರೀತಿಯಿಂದ ಹೊಳೆಯುವ ಕಣ್ಣುಗಳಿಂದ ಅವನ ಮುಖದ ಕಡೆ ನೋಡಿತು.

ಹಲ್ಕೂ ಹೇಳಿದ, 'ಇವತ್ತು ಇನ್ನೊಂದಿಷ್ಟು ಚಳಿ ಅನುಭವಿಸು. ನಾಳೆಯಿಂದ ನಾನು ಇಲ್ಲಿ ಒಣಹುಲ್ಲು ಹರಡುತ್ತೀನಿ. ಅದರೊಳಗೇ ತೂರಿಕೊಂಡುಬಿಡಬೇಕು. ಆಗ ಚಳಿ ಹತ್ತೋದಿಲ್ಲ.'

ಜಬರಾ ಕಾಲಿನ ಇನ್ನೊಂದು ಪಂಜಾ ಅನ್ನು ಅವನ ಮೊಳಕಾಲ ಮೇಲೆ ಇಟ್ಟಿತು. ಆಮೇಲೆ ತನ್ನ ಮುಖವನ್ನು ಅವನ ಮುಖದ ಹತ್ತಿರಕ್ಕೆ ತೆಗೆದುಕೊಂಡುಹೋಯಿತು. ಹಲ್ಕೂಗೆ ಅದರ ಬಿಸಿ ಉಸಿರು ತಾಕಿತು.

ಚಿಲುಮಾ ಸೇದಿ ಹಲ್ಕೂ ಮತ್ತೆ ಮಲಗಿದ. ಈ ಸಲ ನಿದ್ದೆ ಮಾಡಲೇಬೇಕು ಅಂತ ನಿರ್ಧರಿಸಿ ಮಲಗಿದ್ದ. ಆದರೆ, ಒಂದೇ ಕ್ಷಣದಲ್ಲಿ ಅವನ ಎದೆಯಲ್ಲಿ ನಡುಕ ಶುರುವಾಯಿತು. ಒಂದು ಸಲ ಈ ಕಡೆ ಮಗ್ಗುಲು ತಿರುಗಿಕೊಂಡರೆ ಇನ್ನೊಂದು ಸಲ ಆಕಡೆ ಮಗ್ಗುಲು ತಿರುಗಿಕೊಳ್ಳುತ್ತಿದ್ದ. ಚಳಿ ಯಾವುದೋ ಪಿಶಾಚಿ ಥರ ಅವನ ಎದೆಯನ್ನು ಅದುಮಿಕೊಂಡಿತ್ತು.

ಹೇಗೇ ಮಾಡಿದರೂ ತಡೆಯಕ್ಕಾಗದೆ ಇದ್ದಾಗ ಅವನು ನಿಧಾನಕ್ಕೆ ಜಬರನನ್ನು ಎಬ್ಬಿಸಿದ. ಅದರ ತಲೆಯನ್ನು ತಟ್ಟುತ್ತ ತನ್ನ ಮಡಿಲಲ್ಲಿ ಮಲಗಿಸಿಕೊಂಡ. ನಾಯಿಯ ಮೈಯಿಂದ ಅದೆಂಥ ಕೆಟ್ಟ ವಾಸನೆ ಹೊರಡುತ್ತಿತ್ತೋ ಏನೋ. ಆದರೆ, ಅದನ್ನು ತನ್ನ ಮಡಿಲಿಗೆ ಅಂಟಿಸಿಕೊಂಡಿದ್ದರಿಂದ ಅವನಿಗೆ ಎಲ್ಲಿಲ್ಲದ ಸುಖದ ಅನುಭವವಾಗತೊಡಗಿತು. ಇಂಥ ಸುಖ ಅನೇಕ ತಿಂಗಳುಗಳಿಂದ ಅವನಿಗೆ ಸಿಕ್ಕಿರಲಿಲ್ಲ. ಸ್ವರ್ಗ ಅಂದರೆ ಬಹುಶಃ ಇಲ್ಲೇ ಇರಬೇಕು ಅಂತ ಜಬರನಿಗೂ ಅನ್ನಿಸುತ್ತಿತ್ತು. ಹಲ್ಕುವಿನ ಪವಿತ್ರ ಆತ್ಮದಲ್ಲಂತೂ ಆ ನಾಯಿಯ ವಿಷಯಕ್ಕೆ ಕಿಂಚಿತ್ತೂ ತಿರಸ್ಕಾರವಿರಲಿಲ್ಲ. ತನ್ನ ಯಾರಾದರೂ ಅತ್ಯಂತ ಆತ್ಮೀಯ ಮಿತ್ರನನ್ನೋ ಸೋದರನನ್ನೋ ಇಷ್ಟೇ ಪ್ರೀತಿಯಿಂದ ಆಲಂಗಿಸಿಕೊಳ್ಳುತ್ತಿದ್ದ. ಈಗ ಅವನು ಈ ಹೊತ್ತು ತನ್ನನ್ನು ಈ ಸ್ಥಿತಿಗೆ ತಂದಿದ್ದಂಥ ದೈನ್ಯತೆಯಿಂದ ಆಘಾತಕ್ಕೆ ಒಳಗಾಗಿರಲಿಲ್ಲ. ನಿಜ ಹೇಳಬೇಕೆಂದರೆ ಈ ಅದ್ಭುತ ಮೈತ್ರಿಯು ಅವನ ಆತ್ಮದ ಬಾಗಿಲನ್ನು ತೆರೆದುಬಿಟ್ಟಿತ್ತು. ಅವನ ರೋಮ ರೋಮವೂ ಪ್ರಕಾಶದಿಂದ ಹೊಳೆಯುತ್ತಿತ್ತು.

ಇದ್ದಕ್ಕಿದ್ದಂತೆ ಜಬರನಿಗೆ ಯಾವುದೋ ಪ್ರಾಣಿಯ ಸದ್ದು ಕೇಳಿಸಿತು. ಈ ವಿಶೇಷ ಆತ್ಮೀಯತೆಯು ಅದರಲ್ಲಿ